ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೨
ಸಂಚಿಕೆ : ೦೨

೬

(ಖಾಸಗಿ ಪ್ರಸಾರಕ್ಕಾಗಿ ಮಾತ್ರ)

ಏಪ್ರಿಲ್ - ಜೂನ್ ೨೦೦೮

ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್


ಪರಿವಿಡಿ

೧. ಡಾ. ಅ.ನ.ಕೃ.
೨. ಸಂಪಾದಕೀಯ / ೨
೩. ಪ್ರತಿಷ್ಠಾನದ ವಾರ್ತೆ / ೩
೪. ಬೆಳ್ಳೂರು ಶಾಖೆ/ ಎಂ.ವಿ.ಸೀ ಕೇಂದ್ರದ ವರದಿ / ೫
೫. ಅಭಿನಂದನೆಗಳು / ೬
೬. ಶ್ರದ್ಧಾಂಜಲಿ / ೭
೭. ಗ್ರಂಥ ಪರಿಚಯ / ೮

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ,
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೧೯
ದೂರವಾಣಿ : ೨೬೬೧೫೪೮೭

ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ

"ಕನ್ನಡ ಚಳವಳಿಗೆ ಜೀವನ ಮುಡಿಪಿಟ್ಟ ಆದರ್ಶವ್ಯಕ್ತಿ - ಡಾ. ಅ.ನ.ಕೃ."



ದಿನಾಂಕ ೨೬-೪-೦೮ರಂದು ಡಾ. ಅ.ನ.ಕೃ. ಶತವಮಾನೋತ್ಸವವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಆಚರಿಸಲಾಯಿತು. ನಾಡು ನುಡಿಯ ಬಗ್ಗೆ ಅವರ 'ನುಡಿಮುತ್ತು'ಗಳು ಕನ್ನಡಿಗರನ್ನು ಸದಾ ಜಾಗೃತ ಸ್ಥಿತಿಯಲ್ಲಿರಿಸಲು ಸಹಕಾರಿಯಾಗಿವೆ.

ಅನಕೃ ನುಡಿಮುತ್ತುಗಳು

ವಿದ್ಯೆ, ವಿನಯ, ಔದಾರ್ಯ ಒಂದೆಡೆ ಸೇರುವುದು ವಿರಳ; ಕಲಾವಿದರು, ಕಲಾವಿದರನ್ನು ಮೆಚ್ಚುವುದು, ಪ್ರೋತ್ಸಾಹಿಸುವುದೂ ವಿರಳ * ಸಾಹಿತ್ಯ ಕಾಲದಶಿಶುವೂ ಹೌದು, ಕಾಲದ ಮಾತೃವೂ ಹೌದು * ಪ್ರಶ್ನೆಯೇ ಪ್ರಗತಿಯ ಪ್ರಥಮ ಹೆಜ್ಜೆ * ಕನ್ನಡ-ಕನ್ನಡನಾಡು ಕೆಲವು ವ್ಯಕ್ತಿಗಳ ಮಹಾತ್ವಾಕಾಂಕ್ಷೆ ಸಾಧನೆಗಳ ಪಾದಪೀಠವಾಗಿದೆ * ವಿಧಿ ದುರ್ಬಲರನ್ನು ಮಾತ್ರ ಕಬಳಿಸಬಲ್ಲದು, ಸಬಲರ ತಂಟೆಗೆ ಅದು ಹೋಗುವುದಿಲ್ಲ * ಉದಾತ್ತ ಜೀವನ ಅರ್ಥವಾಗುವುದು ಉದಾತ್ತ ಜೀವಿಗೆ ಮಾತ್ರ * ಸತ್ಯ ಸತ್ತಂದು ಜಗತ್ತು ಶೂನ್ಯವಾಗುತ್ತದೆ * ಅಜ್ಞಾನದ ದುರುಪಯೋಗ ಮಾಡಿಕೊಳ್ಳುವುದು ದೌರ್ಜನ್ಯವೆಂದೇ ನನ್ನ ಮತ * ವ್ಯಕ್ತಿ ಎಷ್ಟೇ ದೊಡ್ಡವನಾದರೂ ಅಲ್ಪಾಯು, ತತ್ವನಿಷ್ಠೆ ಸಣ್ಣದಾದರೂ ಚಿರಾಯು * ಲೌಕಿಕ ಸಾಮ್ರಾಜ್ಯದ ಬೆಳೆಯೊಂದಿಗೆ ಆಧ್ಯಾತ್ಮಿಕ, ಸಾಮ್ರಾಜ್ಯವೂ ಬೆಳೆಯುತ್ತ ಹೋಗಬೇಕು, ಅದು ಯಾವ ವ್ಯಕ್ತಿಯನ್ನು ಅವಲಂಬಿಸಬಾರದು * ಯಾವುದು ಸತ್ಯವೋ ಅದೇ ಧರ್ಮ, ಆ ಧರ್ಮ ಒಂದೇ ಒಂದು. ಇಸ್ಲಾಂ ಆ ಧರ್ಮದ ಶಾಖೆಮಾತ್ರ, ಅದರ ಮೂಲ ಬೇರಲ್ಲ, ವೇದಾಂತ(ಹಿಂದೂ ಧರ್ಮ) ಕ್ರಿಸ್ತಧರ್ಮಗಳೂ ಹಾಗೆಯೇ * ಕವಿಯ ಜಾತಿಮತವಾಗಲಿ, ಭಾಷೆಯಾಗಲಿ, ದೇಶವಾಗಲಿ ಮುಖ್ಯವಲ್ಲ. ಅವನ ಕಾವ್ಯದ ಓಜಸ್ಸು, ಅದರಿಂದ ಜನತೆಯ ಮೇಲಾಗುವ ಪರಿಣಾಮ ಮುಖ್ಯ * ಅಂತಃಕರಣದ ಉನ್ನತವಾದ ಲಕ್ಷ್ಯವೇ ನ್ಯಾಯ, ಅನೇಕ ಸಲ ನ್ಯಾಯಶಾಸ್ತ್ರಕ್ಕೆ ಹೊಳೆಯದ ಸೂಕ್ಷ್ಮ ತತ್ವಗಳು ಅಂತಃಕರಣಕ್ಕೆ ಹೊಳೆಯುತ್ತವೆ. * ಗೀತೆ ಒಂದು ಗ್ರಂಥವಲ್ಲ, ಗ್ರಂಥ ಸಮುದಾಯ, ವೇದೋಪನಿಷತ್ತುಗಳ ಸಾರ ಸರ್ವಸ್ವವನ್ನು ಕರತಲಾಮಲಕ ಮಾಡಿರುವ ಮಹಾಕೃತಿ ಭಗವದ್ಗೀತೆ * ಕಲಾವಿದನಿಗಿಂತ ಕಲೆದೊಡ್ಡದು, ಕಲೆಗಿಂತ ಮಾನವ್ಯ ದೊಡ್ಡದು * ಮನುಷ್ಯನಿಗೂ ಮೃಗಕ್ಕೂ ಇದರ ಕೆಲವೇ ವ್ಯತ್ಯಾಸಗಳಲ್ಲಿ ಪ್ರಧಾನವಾದುದು ಹಾಸ್ಯ ಪ್ರಿಯತೆ * ಮನುಷ್ಯನ ಬಾಳಿಗೆ ಕಳೆಯನ್ನೂ ಕೊಡುವುದು ಅಪ್ಪನ ಆಸ್ತಿಯಲ್ಲ-ಕಂಡವರ ದುಡ್ಡಲ್ಲ, ಆತ್ಮಾವಲಂಬನ.

ಕೃಪೆ : 'ಅಮರಚೇತನ'

ಸಂಪಾದಕೀಯ ....

ಪ್ರೊ. ಎಂ.ವಿ. ಸೀತಾರಾಮಯ್ಯ ಅವರು ಹಲವು ಮೂಲೋದ್ದೇಶಗಳನ್ನು ಗಮನದಲ್ಲಿರಿಸಿಕೊಂಡು ಈ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸಿದ್ದಾರೆ. ಈ ಉದ್ದೇಶಗಳಿಗೆ ಧಕ್ಕೆಬಾರದಂತೆ ಪ್ರತಿಷ್ಠಾನ ತನ್ನ ಕಾರ್ಯಚಟುವಟಿಕೆಗಳನ್ನು ೨೮ ವರ್ಷಗಳಿಂದ ಸತತವಾಗಿ ನಡೆಸಿಕೊಂಡು ಬರುತ್ತಿದೆ. ಈಗ ಡಾ.ಪಿ.ವಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿನ ಆಡಳಿತ ಮಂಡಲಿ ಪ್ರತಿಷ್ಠಾನದ ಕಾರ್ಯಚಟುವಟಿಕೆಗಳಿಗೆ ನವದೃಷ್ಟಿ, ಹೊಸ ಚೈತನ್ಯ ನೀಡಲು ಮುಂದಾಗಿದೆ.

ಪ್ರಾಚೀನ ಸಾಹಿತ್ಯ ಅದರಲ್ಲೂ ಹಳಗನ್ನಡ ಕಾವ್ಯಗಳನ್ನು ಅಭ್ಯಾಸಮಾಡುವ ಉತ್ಸಾಹ ಈಗಿನ ಸಾಹಿತ್ಯಪ್ರಿಯರಲ್ಲಿ ದಿನೇ ದಿನೇ ಕುಂಠಿತವಾಗುತ್ತಿರುವ ಪ್ರವೃತ್ತಿ ನಾಡಿನ ಸಂಪನ್ನ ಸಾಹಿತ್ಯದ ಹಿತದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಶೀಘ್ರದಲ್ಲೆ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಲಭಿಸುತ್ತಿರುವ ಈ ಸಂದರ್ಭದಲ್ಲಿ ನಮ್ಮ ಪ್ರೌಢ ಸಾಹಿತ್ಯದ ಮೌಲ್ಯವನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ, ಈ ದಿಸೆಯಲ್ಲಿ ಕಿಂಚಿತ್ತಾದರೂ ಈ ಮಹತ್ವದ ಕರ್ತವ್ಯ ನಿರ್ವಹಣೆಯಲ್ಲಿ ಸಹಯೋಗ/ಸಹಕಾರ ನೀಡಲು ಪ್ರತಿಷ್ಠಾನ ಮುಂದಾಗುತ್ತಿದೆ. ಹಳಗನ್ನಡ ಸಾಹಿತ್ಯ ಶಿಬಿರಗಳನ್ನು ಮತ್ತು ತರಗತಿಗಳನ್ನು ನಡೆಸುವುದು, ಈ ಶಿಕ್ಷಣವನ್ನು ಡಿಪ್ಲೋಮಾ ಆಗಿ ಪರಿವರ್ತಿಸುವುದು ಮುಂತಾದ ಕಾರ್ಯಯೋಜನೆಗಳನ್ನು ಕಾರ್ಯಗತ ಗೊಳಿಸಲು ಸನ್ನದ್ಧವಾಗಿದೆ. ಹೆಚ್ಚು ಮೌಲ್ಯಾಧಾರಿತ ಗ್ರಂಥ ಸಂಗ್ರಹವನ್ನು ಹೊಂದಿರುವ ನಮ್ಮ ಗ್ರಂಥಾಲಯವನ್ನು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿ, ಕಂಪ್ಯೂಟರೀಕರಣಗೊಳಿಸುವುದು, ಸಂಶೋಧಕರಿಗೆ ಸದಾ ಲಭ್ಯವಾಗಿರುವಂತೆ ಸೂಕ್ತ ವ್ಯವಸ್ಥೆ ಮಾಡುವುದು, ಮುಂತಾದವುಗಳಲ್ಲದೆ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಹೆಚ್ಚು ಆಧುನಿಕ ಸೌಕರ್ಯಗಳೊಂದಿಗೆ ನಡೆಸಲು ಅನುಕೂಲವಾಗುವಂತೆ ಪ್ರತಿಷ್ಠಾನದ ಸಭಾಂಗಣಕ್ಕೆ ಸೌಂಡ್ ಪ್ರೂಫ್ ವ್ಯವಸ್ಥೆಯನ್ನು ಅಳವಡಿಸುವುದು, ನಿರಂತರ ವಿದ್ಯುತ್ ಇರುವಂತೆ ಯು.ಪಿ.ಎಸ್. ಸೌಕರ್ಯ ಕಲ್ಪಿಸುವುದು, ಮುಂತಾದವನ್ನು ಮಾಡಲು ಮುಂದಾಗಿದೆ.

ಪ್ರಸ್ತುತ ಪ್ರತಿಷ್ಠಾನ ಸುಮಾರು ೩೫ಕ್ಕೂ ಹೆಚ್ಚು ದತ್ತಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಕಾರ್ಯಕ್ರಮಗಳಿಗೆ ಹೆಚ್ಚು ಆಸಕ್ತರನ್ನು ಆಕರ್ಷಿಸುವ ದೃಷ್ಟಿಯಿಂದ ಈ ಕಾರ್ಯಕ್ರಮಗಳ ಜೊತೆ ಜೊತೆಯಲ್ಲಿ 'ಸಿರಿ ಸಂಗೀತ', ಸಹೃದಯಗೋಷ್ಠಿ ಸಿರಿಕಂಠ-ವಿದ್ಯಾರ್ಥಿಗೋಷ್ಠಿ ಮುಂತಾದವುಗಳನ್ನೂ ಆಯೋಜಿಸುತ್ತಿದೆ. ಈ ಕಾರ್ಯಕ್ರಮಗಳಲ್ಲದೆ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಮಾನ್ಯತೆ ಪಡೆದ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರವು ಎಂಫಿಲ್, ಪಿಎಚ್.ಡಿ. ವಿದ್ಯಾರ್ಥಿಗಳಿಗೂ ತರಬೇತಿ ತರಗತಿಗಳನ್ನು ನಡೆಸಿಕೊಂಡು ಬರುತ್ತಿದೆ. 'ಹಸ್ತಪ್ರತಿಶಾಸ್ತ್ರ' ತರಬೇತಿ ತರಗತಿಗಳನ್ನೂ ಹಸ್ತಪ್ರತಿ ಅಧ್ಯಯನ ಡಿಪ್ಲೋಮಾ ತರಗತಿಗಳನ್ನೂ ನಡೆಸುತ್ತಿರುವುದಲ್ಲದೆ ಹಳಗನ್ನಡ ಕಾವ್ಯಾಭ್ಯಾಸ ಶಿಬಿರವನ್ನು ಶೀಘ್ರವೇ ನಡೆಸಲು ತೀರ್ಮಾನಿಸಿದ್ದೇವೆ.

ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಸಹೃದಯ ಸದಸ್ಯರುಗಳ ಸಹಕಾರ/ಸಹಯೋಗ ಅತ್ಯಾವಶ್ಯಕವಾಗಿದೆ. ಈಗ ನಡೆಸುತ್ತಿರುವ ಕಾರ್ಯಕ್ರಮಗಳಲ್ಲಿನ ಬದಲಾವಣೆ, ಸುಧಾರಣೆ ಬಗ್ಗೆ ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ.

ಡಾ. ಬಿ.ಎಂ.ಶ್ರೀ. ಮತ್ತು ಪ್ರೊ. ಎಂ.ವಿ.ಸೀತಾರಾಮಯ್ಯ ಅವರುಗಳ ಮೇಲಿನ ಅಮಿತ ಗೌರವದಿಂದ ಹಾಗೂ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಬಹುದಿನದ ಸಂಬಂಧದ ಕುರುಹಾಗಿ ಮೇ॥ ಇಳಾ ಮುದ್ರಣದ ಶ್ರೀ ಬಿ. ಗುರುಮೂರ್ತಿ ಅವರು ಬಿ.ಎಂ.ಶ್ರೀ. 'ಪ್ರತಿಷ್ಠಾನದ ವಾರ್ತಾಪತ್ರ'ಕ್ಕೆ ಪ್ರಾಯೋಜಕರಾಗಲು ಮುಂದೆ ಬಂದಿದ್ದಾರೆ. ಅವರ ಈ ವಿಶ್ವಾಸ, ಅಭಿಮಾನಕ್ಕೆ ನಾವು ಕೃತಜ್ಞರಾಗಿದ್ದೇವೆ ಹಾಗೂ ಈ ಸ್ತುತ್ಯರ್ಹ ಕೊಡುಗೆಗಾಗಿ ಅವರನ್ನು ಅಭಿನಂದಿಸುತ್ತಿದ್ದೇವೆ.

ಎಸ್.ವಿ. ಶ್ರೀನಿವಾಸರಾವ್
ಸಂಪಾದಕರು

ಪ್ರತಿಷ್ಠಾನದ ವಾರ್ತೆ

ಕಾರ್ಯಕ್ರಮಗಳು

೨೯/೩/೦೮ ಡಿ.ವಿ.ಜಿ. ದತ್ತಿ ಉಪನ್ಯಾಸ ಕಾರ್ಯಕ್ರಮ


(ದಾನಿಗಳು ದಿ॥ ಎಸ್.ಕೆ. ಲಕ್ಷ್ಮಣರಾವ್)

ಡಿ.ವಿ.ಜಿ ಅವರ ಕಾವ್ಯ ಕುರಿತು ಖ್ಯಾತ ಸಾಹಿತಿಗಳಾದ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ ಅವರು ದತ್ತಿ ಉಪನ್ಯಾಸ ನೀಡಿದರು. ಮುಖ್ಯ ಅತಿಥಿ ಹಿರಿಯ ಪತ್ರಕರ್ತ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಎಚ್.ಎಸ್. ದೊರೆಸ್ವಾಮಿ ಅವರು ಡಾ. ಡಿ.ವಿ.ಜಿ. ಅವರೊಡನೆ ತಮಗಿದ್ದ ಮಧುರ ಸಂಬಂಧವನ್ನು ಮೆಲುಕು ಹಾಕಿಕೊಂಡರು. ಪತ್ರಕರ್ತರಾಗಿ ಡಾ. ಡಿ.ವಿ.ಜಿ. ಅವರು ಅನುಭವಿಸಿದ್ದ ಬವಣೆ ಹಾಗೂ ಪತ್ರಿಕಾವೃತ್ತಿ ನಿರ್ವಹಣೆಯಲ್ಲಿ ಅವರಿಗಿದ್ದ ಅಪಾರ ಕಾಳಜಿಯ ಮೇಲೆ ಬೆಳಕು ಚೆಲ್ಲಿದರು. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ನಾಡೋಜ, ಜಿ. ನಾರಾಯಣ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಡಾ. ಡಿ.ವಿ.ಜಿ. ಅವರು ಕ.ಸಾ. ಪರಿಷತ್ತಿನ ಚಟುವಟಿಕೆಗಳಲ್ಲಿ ತೋರಿಸುತ್ತಿದ್ದ ಆಸಕ್ತಿ, ಕನ್ನಡ ನಾಡು, ನುಡಿಯ ಬಗ್ಗೆ ಅವರಿಗಿದ್ದ ಅಪಾರ ಪ್ರೀತಿಯನ್ನು ಪ್ರತಿಬಿಂಬಿಸುವ ಹಲವಾರು ಘಟನೆಗಳನ್ನು ವಿವರಿಸಿ ಆ ಪ್ರಾತಃಸ್ಮರಣೀಯರಿಗೆ ನುಡಿ ನಮನ ಸಲ್ಲಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಡಾ. ಪಿ.ವಿ. ನಾರಾಯಣ ಸ್ವಾಗತಿಸಿದರು. ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಎಸ್.ವಿ. ಶ್ರೀನಿವಾಸರಾವ್ ವಂದನಾರ್ಪಣೆ ಮಾಡಿದರು. ಪ್ರೊ. ನಾ. ಗೀತಾಚಾರ್ಯ ಪ್ರಾಸ್ತಾವಿಕ ನುಡಿಯೊಡನೆ ಕಾರ್ಯಕ್ರಮ ನಿರೂಪಿಸಿದರು.

✣ ✣

೨೬/೪/೨೦೦೮, ಡಾ. ಅ.ನ.ಕೃ ಶತಮಾನೋತ್ಸವ ಕಾರ್ಯಕ್ರಮ

ಸಹಕಾರ: ಚಂದ್ರಶೇಖರಶರ್ಮದತ್ತಿ (ದಾನಿಗಳು ಡಾ॥ ಬಿ.ಸಿ. ರಾಮಚಂದ್ರಶರ್ಮ) ವೆಂಕಟರಂಗಪ್ಪ ದತ್ತಿ (ದಾನಿಗಳು : ಎ. ನರಸಿಂಹಮೂರ್ತಿ); ವಿ.ಸೀ. ದತ್ತಿ (ದಾನಿಗಳು. ವಿ. ಸಿ. ಸಂಪದ ಮತ್ತು ಅಭಿಮಾನಿಗಳು)



ಡಾ. ಅ.ನ.ಕೃ ಶತಮಾನೋತ್ಸವ ಸಮಾರಂಭ ದಿನಾಂಕ ೨೬-೪-೦೮. ಎಸ್.ವಿ. ಶ್ರೀನಿವಾಸರಾವ್, ಡಾ. ಪಿ.ವಿ. ನಾರಾಯಣ, ಶ್ರೀ ಕೊ. ಚನ್ನಬಸಪ್ಪ, ಶ್ರೀ ಶಾ.ಮಂ. ಕೃಷ್ಣರಾವ್

ನಿವೃತ್ತ ನ್ಯಾಯಾಧೀಶರೂ, ಪ್ರಗತಿಪರ ಚಿಂತಕರೂ, ಹಿರಿಯ ಸಾಹಿತಿಗಳೂ ಆದ ಶ್ರೀ ಕೋ. ಚೆನ್ನಬಸಪ್ಪ ಅವರು ಕಾರ್ಯಕ್ರಮವನ್ನು ದೀಪ ಬೆಳಗಿ ಉದ್ಘಾಟಿಸಿ, ಉದ್ಘಾಟನಾ ಭಾಷಣದಲ್ಲಿ ತಾವು ಹಾಗೂ ಅನಕೃ ಅವರು ನಾಡು ನುಡಿಯ ಕಾರ್ಯಕ್ರಮಗಳಲ್ಲಿ ಅನುಭವಿಸಿದ ಮಧುರ ಕ್ಷಣಗಳನ್ನು ನೆನಪು ಮಾಡಿಕೊಂಡರು. ಅನಕೃ ಅವರ ಅಸದಳ ವಾಗ್ಮಿಯತೆಯನ್ನು ಬಣ್ಣಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಸಾಹಿತಿ, ಅ.ನ.ಕೃ ಅವರ ನಿಕಟವರ್ತಿ ಹಾಗೂ ಆತ್ಮೀಯರೂ ಆಗಿದ್ದ ಶ್ರೀ ಶಾ. ಮಂ ಕೃಷ್ಣರಾಯರು, ಕೃಷ್ಣರಾಯರ ಜೀವನದ ಸ್ಮರಣೀಯ ಘಟನೆಗಳನ್ನು ನೆನಪಿಸಿಕೊಂಡು ಅವರ ಪ್ರಗತಿಪರ ಚಿಂತನಧಾರೆ, ಕನ್ನಡ ಭಾಷೆಯ ಮೇಲಿನ ದಿಟ್ಟ ಅಭಿಮಾನ ಪ್ರದರ್ಶಿಸುವ ಹಲವಾರು ನಿದರ್ಶನಗಳನ್ನು ನೀಡಿದರು.

ಪ್ರಸಿದ್ಧ ವಿಮರ್ಶಕ ಪ್ರೊ॥ ಕಿ. ರಂ. ನಾಗರಾಜ ಅವರು ತಮ್ಮ ಭಾಷಣದಲ್ಲಿ ಅನಕೃ ಅವರ ಸಮಗ್ರ ಸಾಹಿತ್ಯದ ಹಲವು ಮಜಲುಗಳನ್ನ ವಿಮರ್ಶಿಸಿ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನಕೃ ನೀಡಿರುವ ಕೊಡುಗೆ ಬಹಳ ಮಹತ್ವದ್ದು ಎಂದು ಸಕಾರಣವಾಗಿ ವರ್ಣಿಸಿದರು. ಅಧ್ಯಕ್ಷತೆ ವಹಿಸಿದ್ದ ನಾಡೋಜ ಜಿ. ನಾರಾಯಣ ಅವರು ಅ.ನ.ಕೃ. ಅವರೊಡಗಿನ ನಿಕಟ ಸಂಬಂಧವನ್ನು ನೆನಪಿಸಿಕೊಂಡು ತಮ್ಮ ಅಭಿಮಾನ ಪೂರ್ಣ ಮೆಚ್ಚುಗೆಯನ್ನು ಸೂಚಿಸಿದರು. ಅನಕೃ, ರಾಮಮೂರ್ತಿ ಅಂತಹ ಹೋರಾಟಗಾರರು ಪತ್ರಕರ್ತರು ಮತ್ತೆ ಮತ್ತೆ ಕನ್ನಡನಾಡಿನಲ್ಲಿ ಹುಟ್ಟಿಬರಬೇಕು ಎಂದು ಆಶಿಸಿದರು.

ಶ್ರೀ ಎಸ್. ವಿ. ಶ್ರೀನಿವಾಸರಾವ್ ಅತಿಥಿಗಳ ಪರಿಚಯ ಮಾಡಿಸಿ ಸ್ವಾಗತಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಡಾ. ಪಿ.ವಿ. ನಾರಾಯಣ ಅತಿಥಿಗಳಿಗೆ ಹೂಗುಚ್ಛ ಹಾಗೂ ನೆನಪಿನ ಕಾಣಿಕೆಗಳನ್ನು ನೀಡಿ ಗೌರವಿಸಿದರು. ಪ್ರೊ॥ ನಾ. ಗೀತಾಚಾರ್ಯ ಕಾರ್ಯಕ್ರಮ ನಿರೂಪಿಸಿದರು.

✣ ✣

೬/೫/೦೮. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ೨೯ನೇ ಸಂಸ್ಥಾಪನಾ ದಿನಾಚರಣೆ ಮತ್ತು ಸಿರಿ ಸಂಗೀತ ಕಾರ್ಯಕ್ರಮ: ನಿಘಂಟುತಜ್ಞ, ನಾಡೋಜ ಜಿ. ವೆಂಕಟಸುಬ್ಬಯ್ಯ ಅವರು ಬಿ.ಎಂ.ಶ್ರೀ. ಮತ್ತು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸ್ಥಾಪಕರಾದ ಪ್ರೊ॥ ಎಂ.ವಿ. ಸೀತಾರಾಮಯ್ಯ ಅವರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರ ನಿಷ್ಕಾಮ ಸೇವೆಯನ್ನು ಬಣ್ಣಿಸಿದರು. ಅನಾರೋಗ್ಯ ಸ್ಥಿತಿಯಲ್ಲಿದ್ದರೂ ನಿರಂತರ ಕಾಯಕದಲ್ಲಿ ತೊಡಗಿರುತ್ತಿದ್ದ ಎಂ.ವಿ.ಸೀ. ಅವರ ಕಾರ್ಯದಕ್ಷತೆ, ನಾಡು, ನುಡಿಯ ಮೇಲಿದ್ದ ಅಪಾರ ಪ್ರೀತಿಯನ್ನು ಅನೇಕ ಉದಾಹರಣೆಗಳಿಂದ ವಿವರಿಸಿದರು. ಖ್ಯಾತ ಸಂಶೋಧಕರೂ, ವಿಮರ್ಶಕರೂ ಆಗಿದ್ದುದಲ್ಲದೆ ಸೃಜನಶೀಲ ಸಾಹಿತಿಯೂ ಆಗಿದ್ದ ಹೆಗ್ಗಳಿಕೆಗೆ ಅವರು ಭಾಜನರಾಗಿದ್ದರು ಎಂದು ಪ್ರಶಂಸಿದರು. ಅವರ ಅನವರತ ಹಾಗೂ ದಕ್ಷ ಕಾರ್ಯಚಟುವಟಿಕೆಗಳ ಫಲವೇ ಇಂದು ನಿರ್ಮಾಣಗೊಂಡಿರುವ ಈ ಮೂರು ಮಹಲಿನ ಬೃಹತ್ ಕಟ್ಟಡ ಇದರ ಸಂಸ್ಥಾಪನಾಚಾರ್ಯರಿಗೆ ನಮ್ಮ ಮೆಚ್ಚುಗೆಯ ನಮನಗಳು, ಗೌರವಪೂರ್ಣ ಅಭಿವಂದನೆಗಳು, ಅವರ ಅನನ್ಯ ಸೇವೆ ಸಂಸ್ಥೆಯ ಹೆಸರಿನೊಡನೆ ಇಂದೂ ಅಮರವಾಗುಳಿಯುತ್ತದೆ ಅವರ ಶತಮಾನೋತ್ಸವವನ್ನು ಅರ್ಥಪೂರ್ಣ ವಾಗಿಸಬೇಕು ಎಂದು ಹೇಳಿ ಸಂಸ್ಥೆಯ ಪ್ರಗತಿ ಬಗ್ಗೆ ಸಂತಸ ವ್ಯಕ್ತ ಪಡಿಸಿದರು.

ಖ್ಯಾತ ಸಾಹಿತಿ ಹಾಗೂ ವಿದ್ವಾಂಸರಾದ ಪ್ರೊ॥ ಅ.ರಾ. ಮಿತ್ರ ಅವರು ಪ್ರೊ॥ ಎಂ.ವಿ.ಸೀ. ಅವರ ಸಾಹಿತ್ಯದ ಮೇಲೆ ವಿಮರ್ಶಕನ ಕ್ಷಕಿರಣ ಬೀರಿದರು.

ಬಹುಮುಖ ಪ್ರತಿಭೆಯ ವೈಶಿಷ್ಟ್ಯವನ್ನು ಬಣ್ಣಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ನಾಡೋಜ ಜಿ. ನಾರಾಯಣ ಅವರು ಎಂ.ವಿ.ಸೀ. ಅವರು ಸಂಸ್ಥೆ ಕಟ್ಟಲು ಪಟ್ಟ ಪರಿಶ್ರಮವನ್ನು ವಿವರಿಸಿ ಅಂತಹ ನಿಷ್ಠೆಯ ಸೇವಾನಿಷ್ಠರು ಈ ಪ್ರಪಂಚದಲ್ಲಿ ಅತಿ ವಿರಳ ಎಂದು ಪ್ರಶಂಸಿದರು. ಪ್ರತಿಷ್ಠಾನದ ಉದ್ಘಾಟನೆಗೆ ಆಗಮಿಸಿದ್ದ ರಾಷ್ಟ್ರಕವಿ ಡಾ॥ ಕುವೆಂಪು ಅವರು ಎಂ.ವಿ.ಸೀ ಬಗ್ಗೆ ಆಡಿದ್ದ ಪ್ರಶಂಸೆಯನ್ನು ನೆನಪಿಸಿಕೊಂಡರು. ಪ್ರಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರು ಅತಿಥಿಗಳನ್ನು ಸ್ವಾಗತಿಸಿದರು. ಪ್ರೊ॥ ನಾ. ಗೀತಾಚಾರ್ಯ ಸಂಸ್ಥೆಯ ಹುಟ್ಟು ಬೆಳವಣಿಗೆಯ ಬಗ್ಗೆ ಪ್ರಸ್ತಾವನಾ ನುಡಿಗಳನ್ನು ಆಡಿದರು. ಸಂಸ್ಥಾಪಕ ಎಂ.ವಿ.ಸೀ. ಅವರ ಶತಮಾನೋತ್ಸವ ಬರುವ ೯-೯-೦೯ರಂದು ಬರಲಿದ್ದು ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಿ ಯೋಜನೆ ರೂಪಿಸಲಾಗುತ್ತಿದೆ ಎಲ್ಲರೂ ಸಹಕರಿಸಬೇಕೆಂದು ಕೋರಿದರು. ಶ್ರೀ ಎಸ್.ವಿ. ಶ್ರೀನಿವಾಸರಾವ್ ವಂದನಾರ್ಪಣೆ ಮಾಡಿದರು. ಶ್ರೀಮತಿ ಮಾಲತಿಭಟ್ ಪ್ರಾರ್ಥನೆ ಮಾಡಿದ್ದರು.

ಈ ಕಾರ್ಯಕ್ರಮಗಳು ಮುಗಿದ ನಂತರ ಖ್ಯಾತ ಸಂಗೀತ ವಿದ್ವಾಂಸ ಶ್ರೀ ಹುಸೇನ್ ಸಾಬ್ ಅವರು 'ಸಿರಿ ಸಂಗೀತ' ತಿಂಗಳ ಕಾರ್‍ಯಕ್ರಮದ ಅಂಗವಾಗಿ ಹರಿದಾಸರ ಕೀರ್ತನೆಗಳನ್ನು ಪ್ರಸ್ತುತ ಪಡಿಸಿ ಸಭಿಕರನ್ನು ರಂಜಿಸಿದರು. ಎಲ್ಲರ ಮೆಚ್ಚುಗೆ ಪಡೆದರು.

✣ ✣

೩೧/೫/೦೮ ಡಾ. ಎನ್. ಅನಂತರಂಗಾಚಾರ್ ದತ್ತಿ ಉಪನ್ಯಾಸ ಕಾರ್ಯಕ್ರಮ



ಮೇಲ್ಕಂಡ ಉಪನ್ಯಾಸದ ಅಂಗವಾಗಿ ಪ್ರಾಚೀನ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿರುವ ವಿದ್ವಾಂಸ ಡಾ. ಭೀಮರಾವ್‌ಚಿಟಗುಪ್ಪಿ ಅವರ ಸಂಶೋಧನಾ ಸಮೀಕ್ಷೆ ಕುರಿತು ಪ್ರಸಿದ್ಧ ಸಾಹಿತಿ ಡಾ॥ ಶ್ರೀನಿವಾಸ ಹಾವನೂರ ಅವರು ತಮ್ಮ ವಿದ್ವತ್‌ಪೂರ್ಣ ಪ್ರಬಂಧ ಮಂಡಿಸಿದರು. ಸರಕಾರಿ ಕೆಲಸದಿಂದ ನಿವೃತ್ತರಾದ ಮೇಲೆ ಸಾಹಿತ್ಯದ ಮೇಲೆ ಆಸಕ್ತಿಯನ್ನು ಬೆಳೆಸಿಕೊಂಡ ಶ್ರೀಯುತರ ಕಾರ್ಯಕ್ಷಮತೆ ಹಾಗೂ ನೀಡಿರುವ ವಿದ್ವತ್‌ಪೂರ್ಣ ಸಾಹಿತ್ಯ ಕೊಡುಗೆಗಳನ್ನು ಸವಿಸ್ತಾರವಾಗಿ ವಿವರಿಸಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಪ್ರೊ॥ ನಾ. ಗೀತಾಚಾರ್ಯ, ಡಾ॥ ಎನ್. ಅನಂತರಂಗಾಚಾರ್ ಅವರು ಬಹುಭಾಷಾ ಪಂಡಿತರಾಗಿದ್ದು 'ಸಾಹಿತ್ಯ ಭಾರತಿ'ಯಂತಹ ಮೌಲಿಕ ಗ್ರಂಥವನ್ನು ಸಾರಸ್ವತ ಲೋಕಕ್ಕೆ ನೀಡಿರುವುದಲ್ಲದೆ 'ಸೂಕ್ತಿ ಸುಧಾರ್ಣವ'. 'ಕುಮಾರವ್ಯಾಸಭಾರತ', 'ಚಂಪೂಕಾವ್ಯಗಳ ಪದ್ಯಾನುಕ್ರಮಣಿಕೆ' ಮುಂತಾದ ಪ್ರಾಚೀನ ಅಮೂಲ್ಯ ಗ್ರಂಥಗಳನ್ನು ಸಂಶೋಧಿಸಿ ಸಂಪಾದಿಸಿ ನೀಡಿದ್ದಾರೆ. ಎಂದು ಅವರ ಅಪ್ರತಿಮ ವಿದ್ವತ್ತನ್ನು ಪ್ರಶಂಸಿಸಿ ಅತಿಥಿಗಳನ್ನು ಸ್ವಾಗತಿಸಿದರು.

ಹಿರಿಯ ವಿದ್ವಾಂಸ ಪ್ರೊ॥ ಬಸವಾರಾಧ್ಯ ಅವರು ತಮ್ಮ ಗುರುಗಳಾಗಿದ್ದ ಡಾ॥ ಎನ್. ಅನಂತರಂಗಾಚಾರ್ ಮತ್ತು ತಾವು ವಿದ್ಯಾರ್ಥಿಯಾಗಿದ್ದಾಗಿನ ಮಧುರ ಸಂಬಂಧದ ರಸಗಳಿಗೆಗಳ ನೆನಪು ಮಾಡಿಕೊಂಡರು. ಹಲವು ಸ್ವಾರಸ್ಯಕರ ಘಟನೆಗಳನ್ನು ವಿವರಿಸಿದರು. ನಾಡೋಜ ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್.ವಿ. ಶ್ರೀನಿವಾಸರಾವ್‌ರವರು ವಂದನಾರ್ಪಣೆ ಮಾಡಿದರು. ಡಾ॥ ಪಿ. ವಿ. ನಾರಾಯಣ, ಪ್ರತಿಷ್ಠಾನದ ಅಧ್ಯಕ್ಷರು, ವೇದಿಕೆಯಲ್ಲಿ ಉಪಸ್ಥಿತರಿದ್ದರು.

✣ ✣

೩೦-೫-೨೦೦೮ ದ್ರಾವಿಡ ವಿಶ್ವವಿದ್ಯಾಲಯ ಕುಪ್ಪಂ ಸಂಯುಕ್ತ ಆಶ್ರಯದಲ್ಲಿ 'ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ': 'ಉದಯನ ಚರಿತ್ರ ಸಂಗ್ರಹ', 'ಯಾವುದು ಚರಿತ್ರೆ', 'ತೆಲುಗನ್ನಡ ಕಥಾಲು' 'ಪ್ರಾಚೀನ ಕನ್ನಡ ವ್ಯಾಕರಣಾಲು', (ತೆಲುಗು ಪುಸ್ತಕವು ಎಂ.ವಿ. ಸೀತಾರಾಮಯ್ಯನವರ ಕನ್ನಡ ಪುಸ್ತಕದ ಅನುವಾದವಾಗಿದೆ). 'ಯಾಪುರಂಗಲಕಾರಿಕೆ' ಗ್ರಂಥಗಳನ್ನು ಪದ್ಮಶ್ರೀ ಚಂದ್ರಶೇಖರ ಕಂಬಾರ ಮತ್ತು ಡಾ. ಪ್ರಧಾನ ಗುರುದತ್ ಲೋಕಾರ್ಪಣಗೊಳಿಸಿ ಅವುಗಳ ವೈಶಿಷ್ಟ್ಯ ವಿವರಿಸಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಪಿ.ವಿ. ನಾರಾಯಣ ಅವರು ಸ್ವಾಗತಿಸಿದರು. ಕುಲಪತಿಗಳಾದ ಪ್ರೊ॥ ಗಂಗಿಶೆಟ್ಟಿ ಲಕ್ಷ್ಮೀನಾರಾಯಣ ಅವರು ವಿಶ್ವವಿದ್ಯಾಲಯದ ಮುಂದಿರುವ ಮಹತ್ವದ ಯೋಜನೆಗಳನ್ನು ವಿವರಿಸಿ ಅನುವಾದ ಪ್ರಕ್ರಿಯೆಯ ವೈಶಿಷ್ಟ್ಯಗಳನ್ನು ವಿವರಿಸಿ ದಕ್ಷಿಣಭಾಷೆಯ ಮಹತ್ವದ ಗ್ರಂಥಗಳನ್ನೆಲ್ಲಾ ದಕ್ಷಿಣ ಭಾಷೆಗಳಿಗೆಲ್ಲಾ ಅನುವಾದ ಮಾಡಿಸುವ ಆಶಯ ಹೊಂದಿದೆ. ಎಂದು ತಿಳಿಸಿದರು. ಸಂಸ್ಥೆಯ ಕನ್ನಡ ವಿಭಾಗದ ಡಾ॥ ಬಿ.ಎಸ್. ಶಿವಕುಮಾರ್ ವಂದನಾರ್ಪಣೆ ಮಾಡಿದರು. ಪ್ರತಿಷ್ಠಾನದ ಪಿಎಚ್.ಡಿ. ವಿದ್ಯಾರ್ಥಿ ಶ್ರೀ ಕೆ.ವಿ. ಅನಂತ ಪದ್ಮನಾಭ ಕಾರ್ಯಕ್ರಮ ನಿರೂಪಿಸಿದರು.

✣ ✣



ಡಾ. ಪಿ.ವಿ.ನಾರಾಯಣ, ಡಾ. ಪ್ರಧಾನ ಗುರುದತ್, ಪ್ರೊ. ಗಂಗಿಶೆಟ್ಟಿ, ಲಕ್ಷ್ಮೀನಾರಾಯಣ,. ಡಾ. ಚಂದ್ರಶೇಖರ ಕಂಬಾರ, ಶ್ರೀ ಬಾಬು ಕೃಷ್ಣಮೂರ್ತಿ, ಶ್ರೀ ಎಸ್.ವಿ. ಶ್ರೀನಿವಾಸರಾವ್



ದಿನಾಂಕ: ೨೨-೦೬-೨೦೦೮ರಂದು ನಡೆದ ಕಾರ್ಯಕ್ರಮದಲ್ಲಿ : ನಾಡೋಜ ಜಿ. ನಾರಾಯಣ. ಡಾ. ಪಿ.ವಿ. ನಾರಾಯಣ, ಡಾ. ಹೆಚ್.ಎಸ್. ಗೋಪಾಲರಾವ್; ಶ್ರೀ ಮಹಾಬಲ ಮೂರ್ತಿ ಕೊಡ್ಲೆಕೆರೆ.

೧೫-೬-೦೮ ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸಿದ್ಧನಹಳ್ಳಿ ಪ್ರತಿಷ್ಠಾನಗಳ ಸಂಯುಕ್ತಾಶ್ರಯದಲ್ಲಿ ಪುಸ್ತಕ ಬಿಡುಗಡೆ ಹಾಗೂ ಸಿರಿ ಸಂಗೀತ: ಲೇಖಕಿ ಬಿ. ಆರ್ ಉಮಾ ಅವರ 'ನಂದಿ ನೀನೆಷ್ಟು ತಂಪು' ಕಥಾ ಸಂಕಲನ ಮತ್ತು ಕನ್ನಡ ಉಪನ್ಯಾಸಕ ಹಾಗೂ ಸಾಹಿತಿ 'ಸಿಸಿರಾ' ಸಂಪಾದಕತ್ವದ 'ನಮ್ಮ ಜನರವಾಣಿ' ಮಾಸಪತ್ರಿಕೆಗಳು ಬಿಡುಗಡೆಗೊಂಡವು. ನಾಡೋಜ ಡಾ|| ಜಿ. ನಾರಾಯಣ ಸಮಾರಂಭವನ್ನು ಉದ್ಘಾಟಿಸಿ ಪತ್ರಿಕೆ ಬಿಡುಗಡೆ ಮಾಡಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಡಾ. ಸಿ. ವೀರಣ್ಣ 'ನಂದಿ ನೀನೆಷ್ಟು ತಂಪು' ಕಥಾ ಸಂಕಲನವನ್ನು ಬಿಡುಗಡೆ ಮಾಡಿದರು. ಡಾ|| ಕೆ. ಆರ್. ಸಂಧ್ಯಾರೆಡ್ಡಿ, ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಶ್ರೀ ಹೆಚ್. ಕೃಷ್ಣೇಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಯು. ಎಂ. ರವಿ ಅವರಿಂದ 'ಸಿರಿ ಸಂಗೀತ' ಗಾಯನ ಕಾರ್ಯಕ್ರಮದ ಅಂಗವಾಗಿ ಜನಪದ ಗೀತೆಗಳ ಗಾಯನ ನಡೆಯಿತು.

ದಿನಾಂಕ: ೨೨.೦೬.೦೮ ಸಿ.ಕೆ. ನಾಗರಾಜರಾವ್ ದತ್ತಿ ಕಾರ್ಯಕ್ರಮ: ಐತಿಹಾಸಿಕ ಕಾದಂಬರಿಗಳು, ಚಿಂತನ ಗೋಷ್ಠಿ ಪ್ರಾಸ್ತಾವಿಕ ಭಾಷಣ ಮಾಡಿದ ಶ್ರೀ ಎಸ್.ವಿ. ಶ್ರೀನಿವಾಸರಾವ್ ಅತಿಥಿಗಳ ಪರಿಚಯವನ್ನು ಮಾಡಿಸಿ ಎಲ್ಲರನ್ನೂ ಸ್ವಾಗತಿಸಿದರು. ಉಪನ್ಯಾಸ ಮಾಡಿದ ಡಾ. ಹೆಚ್.ಎಸ್. ಗೋಪಾಲರಾವ್ ಕನ್ನಡ ಸಾಹಿತ್ಯದಲ್ಲಿ ಬಂದಿರುವ ಖ್ಯಾತ ಚಾರಿತ್ರಿಕ ಕಾದಂಬರಿಗಳ ಜೊತೆಯಲ್ಲಿ ಸಿ.ಕೆ.ನಾ. ಅವರ ಕಾದಂಬರಿಗಳನ್ನೂ ಸ್ಥೂಲವಾಗಿ ವಿಮರ್ಶಿಸಿದರು. ಖ್ಯಾತ ಸಾಹಿತಿ, ಕಥೆಗಾರ ಶ್ರೀ ಮಹಾಬಲಮೂರ್ತಿ ಕೊಡ್ಲೆಕೆರೆ ಕನ್ನಡ ಕಾದಂಬರಿಗಳಲ್ಲಿನ ಸಮಕಾಲೀನ ಚಿಂತನೆ ಮೇಲೆ ಬೆಳಕು ಬೀರಿದರು. ನಾಡೋಜ ಜಿ. ನಾರಾಯಣ ಅವರು ಕಾರ್ಯಕ್ರಮದ ಉದ್ಘಾಟನೆ ಮಾಡಿ ಸಿ.ಕೆ. ನಾಗರಾಜರಾವ್ ಹಾಗೂ ಸಾಹಿತ್ಯ ಪರಿಷತ್ತಿನ ಮಧ್ಯೆ ಇದ್ದ ಮಧುರ ಸಂಬಂಧವನ್ನು ಮೆಲುಕು ಹಾಕಿ ಸಿ.ಕೆ.ನಾ. ಅವರ ಕಾರ್ಯಕ್ಷಮತೆಯನ್ನು ಪ್ರಶಂಸಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಡಾ. ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ನಾ. ಗೀತಾಚಾರ್ಯ ವಂದನಾರ್ಪಣೆ ಮಾಡಿದರು.

ಸಹೃದಯಗೋಷ್ಠಿ: ಎಂ.ಫಿಲ್., ಪಿಎಚ್.ಡಿ. ಕಾರ್ಯಕ್ರಮ: ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಎಂ.ಫಿಲ್., ಪಿಎಚ್.ಡಿ. ವಿದ್ಯಾರ್ಥಿ ವೇದಿಕೆಯಿಂದ ಈ ಅವಧಿಯಲ್ಲಿ ನಾಲ್ಕು ಸಂವಾದ ಕಾರ್ಯಕ್ರಮಗಳು ನಡೆದಿವೆ.

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಪಿಎಚ್‌ಡಿ, ಎಂಫಿಲ್ ವಿದ್ಯಾರ್ಥಿಗಳ ಸಂವಾದ ಕಾರ್ಯಕ್ರಮಗಳು ಈ ಅವಧಿಯಲ್ಲಿ ನಾಲ್ಕು ಬಾರಿ ನಡೆದಿವೆ.

ಎಂಫಿಲ್ ವಿದ್ಯಾರ್ಥಿಗಳು ತಮ್ಮ ತಮ್ಮ ಸಂಶೋಧನ ವಿಷಯಗಳ ಬಗ್ಗೆ ಟಿಪ್ಪಣಿ ಮಂಡಿಸಿದ್ದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ|| ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಮಾರ್ಗದರ್ಶಕರಾದ ಪ್ರೊ|| ಡಿ. ಲಿಂಗಯ್ಯ ಡಾ|| ಕೆ. ಪಿ. ಭಟ್, ಡಾ|| ಆರ್. ಲಕ್ಷ್ಮೀನಾರಾಯಣ ಡಾ|| ವಿಜಯಾಸುಬ್ಬರಾಜ್, ಪ್ರೊ|| ಕೆ.ಎಸ್. ಮಧುಸೂದನ, ಡಾ|| ಎಚ್.ಎಸ್.ರಾಘವೇಂದ್ರರಾವ್, ಪ್ರೊ|| ಎಂ.ಎಚ್. ಕೃಷ್ಣಯ್ಯ, ಡಾ|| ಕೆ. ಎಲ್. ಗೋಪಾಲ ಕೃಷ್ಣಯ್ಯ, ಡಾ|| ಕೆ.ಆರ್. ಗಣೇಶ್ ಮುಂತಾದವರು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು. ಗೌ|| ಕಾರ್ಯದರ್ಶಿಗಳಾದ ಪ್ರೊ|| ನಾ. ಗೀತಾಚಾರ್ಯರ ನಿರ್ದೇಶನದಲ್ಲಿ ಈ ಕಾರ್ಯಕ್ರಮಗಳು ನಡೆದವು.

ಬೇಲೂರು ಶಾಖೆಯ ವರದಿ

ಬಿಎಂಶ್ರೀ ಊರಾದ ಬೆಳ್ಳೂರಿನಲ್ಲಿರುವ ಆಚಾರ್ಯ ಬಿಎಂಶ್ರೀ ಶತಮಾನ ಭವನದಲ್ಲಿ ಸ್ಥಳೀಯ ಸಮಿತಿ ನಿರಂತರ ಚಟುವಟಿಕೆಗಳನ್ನು ನಡೆಸುತ್ತಿರುತ್ತದೆ. ಈಚೆಗೆ ೧೮.೩.೦೮ ಮತ್ತು ೧೯.೩.೦೮ರಂದು ವ್ಯಕ್ತಿತ್ವ ವಿಕಸನ ಶಿಬಿರವನ್ನು ನಡೆಸಿದೆ. ಸ್ಥಳೀಯ ವಿವೇಕ ಜಾಗೃತಿ ಬಳಗದ ಸಹಕಾರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನೈತಿಕ ಮತ್ತು ರಾಷ್ಟ್ರೀಯ ಜಾಗೃತಿಯ ಬಗ್ಗೆ ಹಾಗೂ ನಾಡು ನುಡಿಯ ಅಭಿಮಾನದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಶ್ರೀ ಕೃಷ್ಣಕುಮಾರ್, ಶ್ರೀ ತೀರ್ಥರಾಮು, ಶ್ರೀ ಪ್ರಕಾಶ್ ಶೆಟ್ಟಿ ಮತ್ತು ಶ್ರೀ ಎ.ಎಸ್. ಮೋಹನ್‌ಕುಮಾರ್ ಮಾಹಿತಿ ನೀಡಿದರು.

ಗ್ರಾಮಪಂಚಾಯಿತಿ ಉಪಾಧ್ಯಕ್ಷರಾದ ಶ್ರೀ ಅಬ್ದುಲ್ ಕಲೀಂ ಭವನದ ಸ್ಥಳೀಯ ಸಮಿತಿ ಕಾರ್ಯಾಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿ ಕೋಶಾಧಿಕಾರಿಗಳಾದ ಶ್ರೀ ಬಿ.ಜೆ. ಸುನಿಲ್ ಕುಮಾರ್ ಮುಂತಾದವರು ಉಪಸ್ಥಿತರಾಗಿದ್ದ ಈ ಕಾರ್ಯಕ್ರಮವನ್ನು ಕಾರ್ಯದರ್ಶಿಗಳಾದ ಶ್ರೀ ಸೋಮಸುಂದರ್ ನಿರ್ವಹಣೆ ಮಾಡಿದರು.

ಜನವರಿ ೩ರಂದು ಬಸ್ ನಿಲ್ದಾಣದಲ್ಲಿರುವ ಬಿಎಂಶ್ರೀ ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮವನ್ನು ನಡೆಸಲಾಗಿತ್ತು. ಗ್ರಾಮಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಕಲಾವತಿ, ಉಪಾಧ್ಯಕ್ಷ ಅಬ್ದುಲ್ ಕಲೀಂ, ಆರ್.ಡಿ.ಎಸ್. ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಪ್ರಾಚಾರ್ಯ ಮುಂತಾದ ಗಣ್ಯರು ಭಾಗವಹಿಸಿದ್ದರು.

-(ವರದಿ ಸೋಮಸುಂದರ್)

ಬಿ.ಎಂ.ಶ್ರೀ. ಪ್ರತಿಷ್ಠಾನದ ಈಚೀನ ಪ್ರಕಟಣೆಗಳು

೧.	ಇಂಗ್ಲಿಷ್‌ಗೀತೆಗಳು–	ಶ್ರೀ. ಪುನರ್‌ಮುದ್ರಣ (ಮೂಲ ಆಂಗ್ಲ ಕವಿತೆಗಳೊಂದಿಗೆ)	೧೦೦-೦೦
೨.	ಹೊಸಗನ್ನಡ ವ್ಯಾಕರಣ	ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರೀ (ಪುನರ್‌ಮುದ್ರಣ)	೧೦೦-೦೦
೩.	ಕನ್ನಡವೆಂಬ ಕನ್ನಡಿಯಲ್ಲಿ	ಅನುವಾದ (ಇಂಗ್ಲಿಷ್ ಕವಿತೆಗಳ ಅನುವಾದ ಸ್ಪರ್ಧೆಯ ವಿಜೇತ ಕವನಗಳು)	೩೦-೦೦
೪.	ಶ್ರೀಸಾಹಿತ್ಯ ಮಣಿಮಾಲೆ	ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿ (ಬಿ.ಎಂ.ಶ್ರೀ ಅವರ 'ಶ್ರೀ ಸಾಹಿತ್ಯ'ದಲ್ಲಿಲ್ಲದ ಅಪ್ರಕಟಿತ ಲೇಖನಗಳ ಸಂಕಲನ)	೧೭೫-೦೦
೫.	ವೆಂಕಟದಾಸರು ಮತ್ತು ಇತರ ಅದ್ವೈತ ಹರಿದಾಸರ ಕೀರ್ತನೆಗಳು		೭೫-೦೦

ಅಭಿನಂದನೆಗಳು

- **ಯಶವಂತ ಚಿತ್ತಾಲ** : ೨೦೦೭ನೇ ಸಾಲಿನ ಕರ್ನಾಟಕದ ಪ್ರತಿಷ್ಠಿತ **'ಪಂಪ ಪ್ರಶಸ್ತಿ'**ಗೆ ಭಾಜನರಾಗಿದ್ದಾರೆ. ಶ್ರೀಯುತರು ನಾಡಿನ ಶ್ರೇಷ್ಠ ಕಾದಂಬರಿಕಾರರು. ಇವರಿಗೆ ಕ.ಸಾ.ಅಕಾಡೆಮಿಯಿಂದ ಗೌರವ ಪ್ರಶಸ್ತಿ ಹಾಗೂ ಇವರ ಮೂರು ಕಾದಂಬರಿಗಳಿಗೆ ಬಹುಮಾನ ಲಭಿಸಿವೆ.
- **ಗುಬ್ಬಿ ವೀರಣ್ಣ ಪ್ರಶಸ್ತಿ** : ೨೦೦೭ನೇ ಸಾಲಿನ ಈ ಪ್ರಶಸ್ತಿಯನ್ನು ಹಿಂದೂಸ್ತಾನಿ ಗಾಯಕಿ **ಶ್ರೀಮತಿ ಬಳ್ಳಾರಿ ಸುಭದ್ರಮ್ಮ** ಅವರಿಗೆ ನೀಡಲಾಗುತ್ತದೆ ಎಂದು ಸರಕಾರದ ಪ್ರಕಟಣೆ ತಿಳಿಸುತ್ತದೆ (೨೨-೪-೦೮)
- **ಬಸವಶ್ರೀ ಪ್ರಶಸ್ತಿ** : ಬಸವ ವೇದಿಕೆ ವತಿಯಿಂದ ನೀಡಲಾಗುವ ಈ ಪ್ರಶಸ್ತಿ **ಡಾ. ಜಿ. ಎಸ್. ಶಿವರುದ್ರಪ್ಪ** ಅವರಿಗೆ ಸಂದಿದೆ.
- **'ವಚನ ಸಾಹಿತ್ಯ ಶ್ರೀ'** ಬಸವ ವೇದಿಕೆ ವತಿಯಿಂದ ನೀಡಲಾಗುವ ಈ ಪ್ರಶಸ್ತಿ ಸಾಹಿತಿ **ಜಯಶ್ರೀ ದಂಡೆ**ಯವರಿಗೆ ಸಂದಿದೆ.
- **ಅ.ನ.ಕೃ ನಿರ್ಮಾಣ್ ಪ್ರಶಸ್ತಿ** : ದಿನಾಂಕ ೧೧/೫/೦೮ರಂದು ನಿಘಂಟುತಜ್ಞ **ಪ್ರೊ॥ ಜಿ. ವೆಂಕಟಸುಬ್ಬಯ್ಯ** ಅವರಿಗೆ ಸಂದಿದೆ (೧ ಲಕ್ಷ ನಗದು ಮತ್ತು ಪ್ರಶಸ್ತಿ ಪತ್ರ)
- **ಕರ್ನಾಟಕದ ಮುಖ್ಯಮಂತ್ರಿ** : ಸನ್ಮಾನ್ಯ ಶ್ರೀ **ಬಿಎಸ್. ಯಡಿಯೂರಪ್ಪ** ಅವರು ೧೯ನೇ ಮುಖ್ಯಮಂತ್ರಿಯಾಗಿ ೩೦/೫/೨೦೦೮ರಂದು ಅಧಿಕಾರ ಸ್ವೀಕರಿಸಿದ್ದಾರೆ.
- **ಮಾಸ್ತಿ ಪ್ರಶಸ್ತಿ** : ೧೪/೦೬/೦೮ರಂದು ಮಾಸ್ತಿ ಪ್ರತಿಷ್ಠಾನ ನೀಡಿದ ೨೦೦೭ನೇ ಸಾಲಿನ ಈ ಪ್ರಶಸ್ತಿ ನಾಡಿನ ಖ್ಯಾತ ವಿದ್ವಾಂಸ **ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ** ಅವರಿಗೆ ಸಂದಿದೆ.
- **ಡಾ॥ ಸಿದ್ಧಲಿಂಗಯ್ಯ**: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಶ್ರೀಯುತರನ್ನು ಕರ್ನಾಟಕ ಸರ್ಕಾರ 'ಕನ್ನಡ ಪುಸ್ತಕ ಪ್ರಾಧಿಕಾರ'ದ ಅಧ್ಯಕ್ಷರನ್ನಾಗಿ ನೇಮಿಸಿ ಅವರಿಗೆ ಸಚಿವ ಸ್ಥಾನಮಾನ ಸಹ ನೀಡಿದೆ.
- **ಜೈನ್ ಸಾಹಿತ್ಯ ಪ್ರಶಸ್ತಿ** : ಕರ್ನಾಟಕ ತೇರಾಪಂಥ್ ಜೈನ್ ಸಮಾಜ ಆಚಾರ್ಯ ಶ್ರೀಮಹಾಪ್ರಜ್ಞಜೀಯವರ ಹೆಸರಿನಲ್ಲಿ ಸ್ಥಾಪಿಸಿರುವ ಜೈನ ಸಾಹಿತ್ಯ ಪ್ರಶಸ್ತಿಗೆ **ಡಾ॥ ಹಂಪನಾ** ಅವರನ್ನು ಆಯ್ಕೆ ಮಾಡಿದೆ (ಪ್ರಶಸ್ತಿ ೫೧ ಸಾವಿರ ನಗದು ಮತ್ತು ಪ್ರಶಸ್ತಿ ಫಲಕ).
- **ಡಾ॥ ಶ್ರೀನಿವಾಸ ಹಾವನೂರ** : ದಿನಾಂಕ ೨೮/೦೬/೦೮ರಂದು ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ **'ಚಿದಾನಂದ ಪ್ರಶಸ್ತಿ'**ಯನ್ನು ಪ್ರದಾನ ಮಾಡಲಾಯಿತು.
- **ಮುಖ್ಯಮಂತ್ರಿ ಚಂದ್ರು** : ಕರ್ನಾಟಕ ಸರ್ಕಾರ ಮುಖ್ಯಮಂತ್ರಿ ಚಂದ್ರು ಅವರನ್ನು **'ಕನ್ನಡ ಅಭಿವೃದ್ಧಿ ಪ್ರಾಧಿಕಾರ'**ದ ಅಧ್ಯಕ್ಷರನ್ನಾಗಿ ನೇಮಿಸಿದೆ.
- **ಪ್ರೊ॥ ಎಂ. ಆರ್. ದೊರೆಸ್ವಾಮಿ** : ಶಿಕ್ಷಣ ಕ್ಷೇತ್ರಕ್ಕೆ ಇವರು ನೀಡಿರುವ ಅಪೂರ್ವ ಕೊಡುಗೆಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ಇವರನ್ನು **ವಿಧಾನ ಪರಿಷತ್ತಿಗೆ** ಸದಸ್ಯರನ್ನಾಗಿ ನಾಮಕರಣ ಮಾಡಿದೆ.
- **ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ** : ಬಸವನಗುಡಿ ವಿಧಾನಸಭಾ ಕ್ಷೇತ್ರದಿಂದ ಅತ್ಯಧಿಕ ಮತಗಳಿಂದ **ಶಾಸಕರಾಗಿ** ಆಯ್ಕೆಗೊಂಡಿದ್ದಾರೆ.
- **ಡಾ॥ ದೊಡ್ಡರಂಗೇಗೌಡ, ಡಾ॥ ಎಸ್.ಆರ್. ಲೀಲ** : ಖ್ಯಾತ ಕವಿ ಪ್ರೊ॥ ದೊಡ್ಡರಂಗೇಗೌಡ ಮತ್ತು ಪ್ರಸಿದ್ಧ ಲೇಖಕಿ ಡಾ॥ ಎಸ್.ಆರ್. ಲೀಲ ಅವರನ್ನು ಸರ್ಕಾರ **ವಿಧಾನಪರಿಷತ್ತಿಗೆ** ಸದಸ್ಯರನ್ನಾಗಿ ನಾಮಕರಣ ಮಾಡಿ ಸಾಹಿತ್ಯ ಕ್ಷೇತ್ರಕ್ಕೆ ಪ್ರಾಧಾನ್ಯತೆ ನೀಡಿದೆ.

ಮೇಲ್ಕಂಡ ಎಲ್ಲಾ ಸನ್ಮಾನ್ಯರುಗಳಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾರ್ದಿಕ ಅಭಿನಂದನೆಯೊಡನೆ ಶುಭಾಶಯ ಕೋರುತ್ತದೆ.

ಬಿಎಂಶ್ರೀ ಆಂಗ್ಲಗೀತೆ ಸಿ.ಡಿ. ಬಿಡುಗಡೆ

ವೀಣೆಯಲ್ಲಿ ೭೨ ಮೇಳ ಕರ್ತರಾಗಗಳನ್ನು ಬಳಸಿ ಕಲಾವಿದೆ ಸುಕನ್ಯಾವಿಜಯಕುಮಾರ್ ಸಿದ್ಧಪಡಿಸಿರುವ ಕನ್ನಡದ ಕಣ್ವ ಬಿ.ಎಂ. ಶ್ರೀಕಂಠಯ್ಯನವರ ಇಂಗ್ಲಿಷ್‌ಗೀತೆಗಳು ಮತ್ತು ವಿಶ್ವಕವಿ ರವೀಂದ್ರನಾಥ್ ಟ್ಯಾಗೋರ್ ವಿರಚಿತ ಗೀತಾಂಜಲಿ ಸಂಗೀತ ಸಿ.ಡಿ.ಯನ್ನು ಇತ್ತೀಚೆಗೆ ಪ್ರೆಸ್‌ಕ್ಲಬ್‌ನಲ್ಲಿ ಬಿಡುಗಡೆ ಮಾಡಲಾಯಿತು. ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಸುಕನ್ಯಾವಿಜಯಕುಮಾರ್ ಇದೊಂದು ವಿಶಿಷ್ಟ ಪ್ರಯೋಗ. ವೀಣೆಯಲ್ಲಿ ೭೨ ಮೇಳ ಕರ್ತರಾಗಗಳನ್ನು ಬಳಸಿ ಈ ಎರಡು ಸಂಗೀತ ಸಿ.ಡಿ.ಗಳನ್ನು ಸಿದ್ಧಪಡಿಸಿರುವುದಾಗಿ ತಿಳಿಸಿದರು. ಮಾಜಿ ಕುಲಪತಿ ಡಾ॥ ಕೆ. ಸಿದ್ದಪ್ಪ ಮತ್ತು ಬಿ.ಎಂ.ಶ್ರೀ ಪ್ರತಿಷ್ಠಾನದ ಪ್ರೊ॥ ಗೀತಾಚಾರ್ಯ ಅವರ ಮಾರ್ಗದರ್ಶನದಿಂದ ಈ ಸಂಗೀತ ಸಿ.ಡಿ. ಸಿದ್ಧಪಡಿಸಿರುವುದರಿಂದ ಇದನ್ನು ಅವರ ಹೆಸರಿಗೆ ಸಮರ್ಪಿಸಿದ್ದೇನೆ ಎಂದರು. ತಮ್ಮ ಈ ಪ್ರಯೋಗದ ಬಗ್ಗೆ ವ್ಯಾಪಕ ಪ್ರಚಾರ ನೀಡುವ ನಿಟ್ಟಿನಲ್ಲಿ ಸದ್ಯದಲ್ಲೇ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರನ್ನು ಭೇಟಿ ಮಾಡುವುದಾಗಿ ಸುಕನ್ಯಾ ವಿಜಯಕುಮಾರ್ ತಿಳಿಸಿದರು.



೨೮-೬-೦೮ರಂದು ಪ್ರೆಸ್ ಕ್ಲಬ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮತಿ ಸುಕನ್ಯಾ ವಿಜಯಕುಮಾರ್ ಅವರ ಇಂಗ್ಲಿಷ್ ಗೀತೆಗಳ ಕ್ಯಾಸೆಟ್ ಮತ್ತು ಗೀತಾಂಜಲಿ ಸಿಡಿಗಳನ್ನು ಬಿಡುಗಡೆಮಾಡಲಾಯಿತು. ಸಿಸ್ಟರ್ ಜಾನ್‌ದೊರೈ, ಬೆಂ.ವಿ.ವಿ. ನಿವೃತ್ತ ಕುಲಪತಿ ಡಾ॥ ಕೆ. ಸಿದ್ಧಪ್ಪ ಮತ್ತು ಬಿಎಂಶ್ರೀ ಪ್ರತಿಷ್ಠಾನದ ಗೌ॥ ಕಾರ್ಯದರ್ಶಿ ಡಾ॥ ನಾ. ಗೀತಾಚಾರ್ಯ ಬಿಡುಗಡೆ ಮಾಡಿದರು.

ಶ್ರದ್ಧಾಂಜಲಿ

- **ಡಾ॥ ಶಾಂತರಸ ಹೆಂಚೇರಾಳು. (೮೫)** ಜೀವಿತಕಾಲ : ೭/೪/೧೯೨೪–೧೩/೪/೦೮ ಗಜಲ್ ಕವಿಯೆಂದು ಖ್ಯಾತರಾಗಿದ್ದ ನಾಡಿನ ಹಿರಿಯ ಸಾಹಿತಿ ದಿನಾಂಕ ೧೩/೪/೦೮ರಿಂದ ಗುಲ್ಬರ್ಗಾದಲ್ಲಿ ನಿಧನರಾದರು. ಎಂ.ಎ, ಬಿ.ಎಡ್. ಪದವಿ ಗಳಿಸಿದ್ದ ಇವರು ಶಿಕ್ಷಕರಾಗಿ ಜೀವನ ಪ್ರಾರಂಭಿಸಿ ರಾಯಚೂರಿನ ಹಮ್ದರ್ದ್ ಕಾಲೇಜಿನಲ್ಲಿ ಪ್ರಾಚಾರ್ಯರಾಗಿದ್ದರು. ೩ ವರ್ಷಕಾಲ ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವಕ್ಕೆ ಭಾಜನರಾಗಿದ್ದರು. ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವಪ್ರಶಸ್ತಿ, ೭೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಹೆಗ್ಗಳಿಕೆ ಇವರದು. ಬಹುಮುಖ ಪ್ರತಿಭೆಯ ಶ್ರೀಯುತರು ಕಥೆ, ಕವನ, ನಾಟಕ ರಚಿಸಿರುವುದರಲ್ಲದೆ ಸಂಪಾದನೆ, ಸಂಶೋಧನೆ, ಕ್ಷೇತ್ರ ಸಹ ಸಂಪನ್ನಗೊಳಿಸಿದ್ದಾರೆ.
- **ಡಾ॥ ಅರವಿಂದ ನಾಡಕರ್ಣಿ(೭೨)** ಜೀವಿತಕಾಲ : ೧/೧/೧೯೩೧ – ೧೯/೫/೦೮. ಖ್ಯಾತ ಸಾಹಿತಿ ಡಾ॥ ಅರವಿಂದ ನಾಡಕರ್ಣಿ ಕಥೆ, ಕವನ ಪ್ರಬಂಧ ಕ್ಷೇತ್ರಗಳಲ್ಲಿ ಕೃಷಿ ಮಾಡಿರುವುದಲ್ಲದೆ 'ಸೃಜನವೇದಿ' ಎಂಬ ಪತ್ರಿಕೆಯ ಸಂಪಾದಕರಾಗಿ ಪತ್ರಿಕಾರಂಗಕ್ಕೆ ಸೇವೆ ಸಲ್ಲಿಸಿದ್ದರು. 'ಆತ್ಮಭಾರತ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಗಳಿಸಿದ್ದರು. ಕಾವ್ಯಾರ್ಪಣ ಜರಾಸಂಧ, ನಗರಾಯಣ, ನಾ ಭಾರತೀಕುಮಾರ, ಮುಂತಾದವು ಇವರ ಪ್ರಮುಖ ಕೃತಿಗಳು.
- **ಆರ್. ಎನ್. ಜಯಗೋಪಾಲ್ : (೭೩)** ಚಲನಚಿತ್ರ ಸಾಹಿತಿ ಹಾಗೂ ಸೃಜನಶೀಲ ಗೀತ ರಚನಕಾರ ಆರ್. ಎನ್. ಜಯಗೋಪಾಲ್ ಅವರು ದಿನಾಂಕ ೧೯/೫/೦೮ರಂದು ನಿಧನರಾದರು. ತಮಿಳುನಾಡಿನ ಅತ್ಯುಚ್ಚನಾಗರೀಕ ಗೌರವಪ್ರಶಸ್ತಿ, ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು. ಹಲವು ಚಿತ್ರಗೀತೆಗಳಿಗೆ ರಾಜ್ಯಪ್ರಶಸ್ತಿ ಲಭಿಸಿತ್ತು.
- **ಅಜ್ಜಂಪುರ ಜಿ. ಸೂರಿ. :** ಅನುವಾದ ಸಾಹಿತ್ಯಕ್ಕೆ (ತೆಲುಗಿನಿಂದ ಕನ್ನಡಕ್ಕೆ) ಖ್ಯಾತರಾಗಿದ್ದ ಶ್ರೀ ಜಿ. ಸೂರಿ ಅವರು ಸೃಜನಶೀಲ ಸಾಹಿತಿಯೂ ಆಗಿದ್ದರು. ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಗ್ರಂಥಾಲಯ ಇಲಾಖೆಯ ಸಗಟು ಖರೀದಿ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹಲವಾರು ಕಥೆ, ಕಾದಂಬರಿ, ನಾಟಕ ಪ್ರಬಂಧಗಳನ್ನು ರಚಿಸಿದ್ದಾರೆ. ಜೀವಿತಕಾಲ ೧೭/೪/೧೯೩೯ – ೨೧/೫/೦೮.
- **ಪ್ರೊ॥ ಜಿ. ಟಿ. ನಾರಾಯಣ ರಾವ್(೮೨)** ಜೀವಿತಕಾಲ : ೧೪/೯/೧೯೨೬ – ೨೬/೬/೦೮ ಪ್ರಖ್ಯಾತ ವಿಜ್ಞಾನ ಲೇಖಕರು ೬೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಇವರ ಹಲವು ಕೃತಿಗಳಿಗೆ ಲಭಿಸಿದೆ. ಕನ್ನಡ ವಿಶ್ವಕೋಶದ ವಿಜ್ಞಾನ ವಿಭಾಗದ ಸಂಪಾದಕರಾಗಿದ್ದರು. ವಿಜ್ಞಾನ ಅಲ್ಲದೆ ಗಣಿತ ಶಾಸ್ತ್ರಕ್ಕೆ ಸಂಬಂಧಿಸಿದ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಮುಖ್ಯ ಕೃತಿಗಳು: ಬಲವಿಜ್ಞಾನ ತತ್ವಗಳು, ನಕ್ಷತ್ರ ವೀಕ್ಷಣೆ; ದೃಢಚಲನೆ, ಕೋಪರ್ನಿಕಸ್, ಶ್ರೀನಿವಾಸ ರಾಮಾನುಜನ್, ಕೊಡಗಿನ ಕಥೆಗಳು, ಮಾನವ ಚಂದ್ರನ ಮೇಲೆ ಮುಂತಾದ ಕೃತಿಗಳು.

ಮೇಲ್ಕಂಡ ಎಲ್ಲಾ ದಿವಂಗತರುಗಳಿಗೆ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಗೌರವಪೂರ್ವಕವಾಗಿ
ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ದಾನಗಳು

೧. ಹಸ್ತಪ್ರತಿದಾನ:

೧. ಶ್ರೀ ವೈ.ಕೆ. ವೆಂಕಟೇಶ ಮೂರ್ತಿ, ಬೆಂಗಳೂರು ಗ್ರಾಮಾಂತರ	–	೧೮ ಓಲೆಗರಿ ಕಟ್ಟುಗಳು

೨. ಗ್ರಂಥದಾನ

೧. ವೇ॥ ಬ್ರ॥ ಶ್ರೀ॥ ಕೆ. ಜಿ. ಸುಬ್ರಾಯಶರ್ಮ, ಬೆಂಗಳೂರು	–	೧೭೫
೨. ಶ್ರೀ ಎಚ್. ಎಸ್. ಅನಂತನಾರಾಯಣ, ಬೆಂಗಳೂರು	–	೧೩ ಪುಸ್ತಕಗಳು
೩. ಶ್ರೀ ಎಸ್. ಕೆ. ಲಕ್ಷ್ಮಣರಾವ್, ಬಂಧು ವರ್ಗ, ಬೆಂಗಳೂರು	–	೧೯ ಪುಸ್ತಕಗಳು
೪. ಶ್ರೀ ಎಂ. ಕೆ. ಗೋಪಿನಾಥ್, ಬೆಂಗಳೂರು	–	೫೪ ಪುಸ್ತಕಗಳು
೫. ಕೆ. ವಸಂತಲಕ್ಷ್ಮಿ ಮತ್ತು ಕೂಸ ಅಪರ್ಣ, ಬೆಂಗಳೂರು	–	೫೦ ಪುಸ್ತಕಗಳು

೩. ಕಚೇರಿ ಸಲಕರಣೆಗಳ ದಾನ

೧. ೦೬–೦೭ನೇ ತಂಡದ ಎಂಫಿಲ್–ವಿದ್ಯಾರ್ಥಿಗಳಿಂದ	–	೮ ಪ್ಲಾಸ್ಟಿಕ್ ಕುರ್ಚಿಗಳು
೨. ಹಿರಿಯ ನಾಗರೀಕರ ಸಹೃದಯ ಸಂಘ ನರಸಿಂಹರಾಜ ಕಾಲೋನಿ, ಬೆಂಗಳೂರು–೧೯	–	೫೦ ಪ್ಲಾಸ್ಟಿಕ್ ಕುರ್ಚಿಗಳು
೩. ಡಾ॥ ಕೆ. ಪಿ. ಭಟ್ – ಬೆಂಗಳೂರು	–	ಒಂದು ಮರದ ಬೀರು, ಒಂದು ಷೋ ಕೇಸ್, ೮ ಟ್ಯೂಬ್‌ಲೈಟ್ ಸೆಟ್‌ಗಳು

೪. ದತ್ತಿನಿಧಿಗೆ ದಾನ

೧. ಎನ್. ಅನಂತರಂಗಾಚಾರ್ ಸ್ಮಾರಕದತ್ತಿನಿದಿ ಸಮಿತಿಯಿಂದ	–	ರೂ. ೬,೬೮೭–೦೦

ಗ್ರಂಥ ಪರಿಚಯ

೧. **ಇಂಗ್ಲಿಷ್ ಗೀತಗಳು:** (ಮೂಲ ಆಂಗ್ಲ ಕವನಗಳೊಂದಿಗೆ) ಲೇಖಕರು: ಬಿ.ಎಂ.ಶ್ರೀಕಂಠಯ್ಯ. ಪ್ರಕಟಣೆ: ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಬೆಂಗಳೂರು-೧೯ ಪುಟಗಳು: XIV + 192 ಬೆಲೆ. ರೂ ೧೦೦/- ದ್ವಿತೀಯ ಮುದ್ರಣ.

ಇಂಗ್ಲೀಷ್ ಕಾವ್ಯ ಸಂಪತ್ತನ್ನು ಪ್ರಥಮತಃ ಕನ್ನಡಕ್ಕೆ ಕನ್ನಡ ನುಡಿಗಟ್ಟಿನಲ್ಲೇ ಪರಿಚಯಿಸಿದ ಯಶಸ್ಸು-ಶ್ರೇಯಸ್ಸು 'ಶ್ರೀ' ಅವರಿಗೆ ಸೇರುತ್ತದೆ. ಕನ್ನಡ ಸಾಹಿತ್ಯಕ್ಕೆ ಹೊಸ ಕಾವ್ಯ ಮಾರ್ಗವನ್ನು ತೋರಿಸಿ ನವೋದಯಕಾವ್ಯದ ಪ್ರವರ್ತಕರಾದರು. ಇಂಗ್ಲೀಷ್ ಕಾವ್ಯಕ್ಷೇತ್ರದ ದಿಗ್ಗಜರ ಕಾವ್ಯಸೌರಭ ಕನ್ನಡ ವಾತಾವರಣದಲ್ಲಿ ಸುಗಂಧ ಹರಿಸಿದೆ.

ಈ ಕೃತಿಗೆ ಹೆಚ್ಚಿನ ಬೇಡಿಕೆ ಇದ್ದುದರಿಂದ ಬಿ.ಎಂ.ಶ್ರೀ. ಪ್ರತಿಷ್ಠಾನವು ಈ ಉಪಯುಕ್ತ ಕೃತಿಯನ್ನು ಮರು ಮುದ್ರಿಸಿದೆ.

೨. **ಶ್ರೀವೈಷ್ಣವ ಹರಿದಾಸ ಸಾಹಿತ್ಯ:** ಲೇಖಕರು: ಪ್ರೊ|| ನಾ. ಗೀತಾಚಾರ್ಯ ಪ್ರಕಟಣೆ: ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ. ಬೆಂಗಳೂರು-೧೮. ಪ್ರಥಮ ಮುದ್ರಣ: ೨೦೦೭. ಪುಟಗಳು XIII+226. ಬೆಲೆ: ರೂ. ೫೫/-

೬೦ರ ದಶಕದಿಂದ ಈ ಕ್ಷೇತ್ರದಲ್ಲಿ ಪ್ರೊ. ಗೀತಾಚಾರ್ಯರು ನಡೆಸಿರುವ ಸಂಶೋಧನೆಯ ಫಲಶ್ರುತಿ ಈ ಕೃತಿ. ಕನ್ನಡ ಹರಿದಾಸ ಸಾಹಿತ್ಯಕ್ಕೆ ವಿಶಿಷ್ಟಾದ್ವೈತ ಪರಂಪರೆಯ ಹರಿದಾಸರುಗಳ ಜೀವನ ಮತ್ತು ಅವರ ವಿಶಿಷ್ಟ ಕೊಡುಗೆಯನ್ನು ಈ ಕೃತಿಯಲ್ಲಿ ನೀಡಲಾಗಿದೆ. ಶ್ರೀವೈಷ್ಣವ ಹರಿದಾಸ ಸಾಹಿತ್ಯದ ಕಿರುದರ್ಶನ ಇಲ್ಲಿ ಲಭ್ಯವಾಗಿದೆ. ಇದೊಂದು ವಿಶಿಷ್ಟಕೃತಿ. ಸಾಹಿತ್ಯಾಸಕ್ತರ ಮನೆಯಲ್ಲಿ ಇರಲೇಬೇಕಾದ ಕೃತಿ.

೨. **ಅಮರ ಚೇತನ :** ಸಂಪಾದಕರು ಶಾ.ಮಂ. ಕೃಷ್ಣರಾಯ. ಪ್ರಕಟಣೆ: ಸಾಗರ ಪ್ರಕಾಶನ, ಬನಶಂಕರಿ ೧ನೇ ಹಂತ, ೨ನೇ ಘಟ್ಟ ಬೆಂಗಳೂರು-೫೦, ಪುಟಗಳು ೮೨೨+೧೪ ಕ್ರಾಸ್೧/೪ ಆಕಾರ. ಬೆಲೆ: ರೂ. ೬೫೦/- ಮೊದಲ ಮುದ್ರಣ ೨೦೦೮.

ಅ.ನ.ಕೃ. ಅವರ ಆಪ್ತವರ್ಗಕ್ಕೆ ಸೇರಿದ ಶ್ರೀ ಶಾ.ಮಂ ಕೃಷ್ಣರಾಯರು ಅನಕೃ ಅವರ ಸಮಗ್ರ ಸಾಹಿತ್ಯ ಪರಿಚಯಿಸುವ ಒಂದು ಕೃತಿ 'ರಸಚೇತನ' ಹಿಂದೆ ಪ್ರಕಟಿಸಿದ್ದರು. ಇದೀಗ ಅವರ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಮತ್ತೊಂದು ಬೃಹತ್ ಕೃತಿಯನ್ನು ಹೊರತರುವ ಸಾಹಸಮಾಡಿ ಯಶಸ್ವಿಯಾಗಿದ್ದಾರೆ. ಅ.ನ.ಕೃ ಅವರ ಸಮಗ್ರ ಸಾಹಿತ್ಯದ ಅವಲೋಕನವನ್ನು ನಾಡಿನ ಹೆಸರಾಂತ ೧೮೦ ಸಾಹಿತಿಗಳು ಮಾಡಿರುತ್ತಾರೆ. ಹಲವು ಲೇಖಕರುಗಳು ಇಂಗ್ಲೀಷಿನಲ್ಲೂ ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ, ಈ ಗ್ರಂಥದ ಲೇಖಕರುಗಳ ಕಿರುಪರಿಚಯವನ್ನು ನೀಡಿರುವುದು ಈ ಕೃತಿಯ ಇನ್ನೊಂದು ವೈಶಿಷ್ಟ್ಯ. ಅ.ನ.ಕೃ ಅವರ ಬಗ್ಗೆ ಸಂಶೋಧನೆ ನಡೆಸುವವರಿಗೆ ಇದು ಅತ್ಯಂತ ಅಮೂಲ್ಯ ಆಕರ ಗ್ರಂಥವಾಗಿದೆ. ನಾಡಿನ ಎಲ್ಲಾ ಗ್ರಂಥಾಲಯಗಳಲ್ಲಿ ಇರಲೇ ಬೇಕಾದ ಅತ್ಯಂತ ಉಪಯುಕ್ತ ಮಾಹಿತಿ ಗ್ರಂಥವಾಗಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮ: ಲೇಖಕರು: ಮೂಲ. ವೀರ ಸಾವರ್ಕರ್. ಅನುವಾದ. ಶ್ರೀ ಬಾಬು ಕೃಷ್ಣಮೂರ್ತಿ. ಪ್ರಕಟಣೆ, ಶ್ರೀಸಮುದ್ಯತ ಸಾಹಿತ್ಯ ಬೆಂಗಳೂರು-೭೬. ಪುಟಗಳು. XXXIII+300. ಬೆಲೆ: ರೂ ೧೬೦/-

ಭಾರತದ ಮಹಾಸಾಹಸಿ, ಸ್ವಾತಂತ್ರ್ಯ ಸಂಗ್ರಾಮದ ಸಾಹಸಿ, 'ವೀರ ಸಾವರ್ಕರ್' ಹಿಂದಿಯಲ್ಲಿ ೧೯೦೭-೦೮ರಲ್ಲಿ ರಚಿಸಿದ್ದ ಸ್ವಾತಂತ್ರ್ಯ ಸಂಗ್ರಾಮದ ರೋಚಕ ನಿಜ ಕಥನವನ್ನು ಯಥಾವತ್ತಾಗಿ ಶ್ರೀ ಬಾಬು ಕೃಷ್ಣ ಮೂರ್ತಿಯವರು ಅನುವಾದಿಸಿ ನೀಡಿರುತ್ತಾರೆ. ಮೈನವಿರೇಳಿಸುವ ಸಾಹಸಮಯ ಘಟನೆಗಳು ಪ್ರತಿ ಭಾರತೀಯನ ಧಮನಿಯಲ್ಲಿ ದೇಶಭಕ್ತಿ ಹಾಗೂ ಹೋರಾಟದ ಕಿಚ್ಚನ್ನು ಪ್ರಚೋದಿಸಲು ಶಕ್ತವಾಗಿದೆ. ಇದೊಂದು ಸಂಗ್ರಹಯೋಗ್ಯ ಕೃತಿ. ಎಲ್ಲರೂ ಓದಲೇ ಬೇಕಾದ ಪುಸ್ತಕ.

ಕಡೆಗೋಲು: ಸ್ಮೃತಿ ಸಂಪುಟ. ಅಖಿಲ ಭಾರತ ೭೪ನೇ ಕನ್ನಡ ಸಾಹಿತ್ಯ ಸಮ್ಮೇಳನ ಉಡುಪಿ ಪ್ರಕಟಿಸಿರುವ ಕೃತಿ. ಸಂಪಾದನೆ: ಡಾ|| ಮಹಾಬಲೇಶ್ವರರಾವ್. ಪುಟಗಳು XII+428. ಬೆಲೆ : ರೂ ೨೦೦/- ಪ್ರಥಮ ಮುದ್ರಣ : ೨೦೦೭. ಈ ವಿಶಿಷ್ಟ ಸ್ಮೃತಿ ಸಂಪುಟದಲ್ಲಿ ನುಡಿತೇರು, ನುಡಿಕೋಡು; ನುಡಿನಾಡು ಎಂಬ ಮೂರು ಭಾಗಗಳಿವೆ. ನಾಡಿತೇರು ವಿಭಾಗದಲ್ಲಿ ಡಾ. ಸಾ. ಶಿ ಮರುಳಯ್ಯನವರು ಮತ್ತು ಶ್ರೀ ಎಸ್. ವಿ. ಶ್ರೀನಿವಾಸರಾವ್‌ರವರ ವಿಶೇಷ ಲೇಖನಗಳಿವೆ. 'ನುಡಿಕೋಡು' ವಿಭಾಗವನ್ನು ೧೦ ಲೇಖಕರು 'ನುಡಿನಾಡು' ವಿಭಾಗವನ್ನು ೨೨ ಲೇಖಕರು ತಮ್ಮ ಮೌಲಿಕ ಲೇಖನಗಳಿಂದ ಸಂಪನ್ನಗೊಳಿಸಿರುತ್ತಾರೆ. ಪ್ರೊ. ಎಲ್.ಎಸ್. ಶೇಷಗಿರಿರಾಯರ ಬದುಕು ಬರಹಕ್ಕೆ ಸಂಬಂಧಿಸಿದ ಲೇಖನಗಳೂ ಇದೆ. ಇದೊಂದು ಸಂಗ್ರಹ ಯೋಗ್ಯ ಕೃತಿ.

ಕನ್ನಡ ಸಾಹಿತಿ ದರ್ಶನ : ಲೇಖಕರು: ಎಸ್. ವಿ. ಶ್ರೀನಿವಾಸರಾವ್. ಪ್ರಕಟಣೆ. ಸೌರಭ ಪ್ರಕಾಶನ. ಬೆಂಗಳೂರು-೫೦. ಪುಟಗಳು. XXIII +730. ಬೆಲೆ : ರೂ ೩೭೫/- ಪರಿಷ್ಕೃತ ವಿಸ್ತೃತ ಮುದ್ರಣ-೨೦೦೭ ಅಧಿಕೃತ ಮಾರಾಟಗಾರರು, ಹೇಮಂತ ಸಾಹಿತ್ಯ, ಬೆಂಗಳೂರು-೧೦.

೧೯೮೯ರಲ್ಲಿ ರಾಷ್ಟ್ರಕವಿ ಡಾ.ಕುವೆಂಪು ಅವರು ತಮ್ಮ ಸ್ವಗೃಹದಲ್ಲಿ ಬಿಡುಗಡೆ ಮಾಡಿದ್ದ ಕೃತಿ ಇದೀಗ ವಿಸ್ತೃತಗೊಂಡು ೩೦೦೦ ಸಾಹಿತಿಗಳ ಕಿರುಪರಿಚಯವನ್ನು ನೀಡುತ್ತಿರುವುದಲ್ಲದೆ ವಿಶಿಷ್ಟ ವಿಭಾಗದಲ್ಲಿ ಸಾಹಿತ್ಯ ಮತ್ತು ಸಾಹಿತ್ಯೇತರ ವಿಭಾಗದಲ್ಲಿ ಪ್ರಶಸ್ತಿ ಗಳಿಸಿರುವವರು, ಹಲವು ಪ್ರಸಿದ್ಧ ಪ್ರಕಾರದ ಅಧ್ಯಕ್ಷರುಗಳ ಸಮಗ್ರ ವಿವರ ಈ ಕೃತಿಯಲ್ಲಿ ಲಭ್ಯವಿದೆ. ಇದು ಲೇಖಕರ ಹತ್ತಾರು ವರ್ಷಗಳ ಪರಿಶ್ರಮದ ಮಹತ್ವಾಕಾಂಕ್ಷೆಯ ಕೃತಿಯಾಗಿದೆ. ಮುನ್ನುಡಿಯಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಬರೆದಿರುವಂತೆ "ಈ ಕೈಪಿಡಿ ಬೇಕಾದ ವಿವರವನ್ನು ಕೂಡಲೇ ದೊರಕಿಸುವ ರೀತಿಯಲ್ಲಿ ಸಿದ್ಧವಾಗಿದೆ. ಉಪಾಧ್ಯಾಯರಿಗೂ ಪತ್ರಕರ್ತರಿಗೂ ಸಂಶೋಧಕರಿಗೂ, ವಿಮರ್ಶೆ ಮಾಡುವವರಿಗೂ ಒಂದೇ ನಿಮಿಷದಲ್ಲಿ ಕೈಗೆಟುಕುವ ಹಾಗೆ ವಿಂಗಡಿಸಿ ಇಟ್ಟಿದ್ದಾರೆ." ಈ ಸಂಗ್ರಹಯೋಗ್ಯ ಕೃತಿ ಸರ್ವರಿಗೂ ಇಷ್ಟವಾಗುವುದರಲ್ಲಿ ಸಂದೇಹವಿಲ್ಲ.

ಅಚ್ಚಾದ ಪುಸ್ತಕ ತೆರೆದ-ಅಂಚೆ

ಶ್ರೀಮತಿ/ಶ್ರೀ......................................

....

....

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೧೯
ದೂರವಾಣಿ : ೨೬೬೧೫೮೭೭

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು - ೨೬. ✆ : ೨೬೭೫೭೧೯೫
'ವಾರ್ತಾಪತ್ರ' ಪ್ರಾಯೋಜಕರು: ಇಳಾ ಮುದ್ರಣ, ಬೆಂಗಳೂರು-೨೬.